ಶ್ರೀ ಎಂ. ಚಂದ್ರಶೇಖರ್(ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ದಿನಾಂಕ ೨-೧೧-೮೩ ರಿಂದ.

ವರ್ಷವಾರು ಶುಲ್ಕ ವಸೂಲಿ ಹಾಗೂ ಸರಾಸರಿ ದಿನದ ವಸೂಲಿ ಕೆಳಗಿನಂತೆ ಇದೆ.

ವರ್ಷವಾರು ವಸೂಲಿ		ಸರಾಸರಿ ದಿನದ ವಸೂಲಿ	
೧೯೮೩-೮೪ (ದಿನಾಂಕ ೨-೧೧-೮೩ ರಿಂದ			
೩೧-೩-೮೪ರವರೆಗೆ	ರೂ. ೫,೨೫,೫೩೮-೦೦	ರೂ.	೩,೫೦೪-೦೦
೧೯೮೪-೮೫	ರೂ. ೧೧,೯೪,೪೬೦-೦೦	ರೂ.	೩,೨೭೩-೦೦
೧೯೮೫-೮೬	ರೂ. ೧೪,೨೬,೫೫೫-೦೦	ರೂ.	೩,೯೧೪-೦೦
೧೯೮೬-೮೭	ರೂ. ೧೪,೯೫,೬೭೯-೦೦	ರೂ.	೪,೦೯-೦೪
೧೯೮೭-೮೮	ರೂ. ೧೫,೪೨,೪೫೦-೦೦	ರೂ.	೪,೨೨೬-೦೦

ಆ) ಕಳೆದ ಮೂರು ವರ್ಷಗಳಲ್ಲಿ ರೂ. ೪೨,೬೬,೬೯೫-೦೦ ವಸೂಲಾಗಿದೆ. ಮುಂದೆ ಮಾಡಬೇಕಾಗಿರುವ ಅಂದಾಜು ವಸೂಲಿ ರೂ. ೩೦,೫೦,೦೦೦-೦೦.

ಇ) ಮೆ: ಜೂನ್ ೧೯೯೦ರವರೆಗೆ ಎಂದು ಅಂದಾಜು ಮಾಡಲಾಗಿದೆ.

ಈ) ಪ್ರಾರಂಭದಲ್ಲಿ ದಿನ ಒಂದಕ್ಕೆ ರೂ. ೩,೫೯೪-೦೦೦ (ಹಾಲಿ) ಈಗ ರೂ. ೪,೨೨೬-೦೦.

ಉ) ಮೇಲೆ '' ಅ '' ಪ್ರಶ್ನೆಗೆ ಉತ್ತರವನ್ನು ಗಮನಿಸಿದರೆ ೮೪-೮೫ ರಿಂದ ಪ್ರತಿ ವರ್ಷ ಶುಲ್ಕ ವಸೂಲಿ ಹೆಚ್ಚಾಗುತ್ತಿದೆಯೇ ವಿನಃ ಕಡಿಮೆಯಾಗುತ್ತಿಲ್ಲ.

ಭದ್ರಾ ಮೇಲ್ದಂಡೆ ಯೋಜನೆ

೨೩೪೧. ಶ್ರೀ ಆರ್. ರಾಮಯ್ಯ(ಹಿರಿಯೂರು).— ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಭಾರಿ ನೀರಾವರಿ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಬೇಸಿನ್‌ನಲ್ಲಿ ಬಚಾವತ್ ಸಮಿತಿಯು ವರದಿಯಂತೆ ರಾಜ್ಯಕ್ಕೆ ದೊರಕುವ ನೀರಿನ ಪ್ರಮಾಣ (ಟಿಎಂಸಿ) ಎಷ್ಟು ? ಸದರಿ ವರದಿಯ ತೀರ್ಪಿನಂತೆ ಹಕ್ಕನ್ನು ಪಡೆಯಲು ನಿಗದಿ ಮಾಡಿರುವ ಇಸವಿ ಯಾವುದು ;

ಆ) ರಾಜ್ಯ ಸರ್ಕಾರವು ಸದರಿ ದೊರಕುವ ನೀರಿನ ಬಳಕೆಗಾಗಿ ಯೋಜಿಸಿಕೊಂಡಿರುವ ಯೋಜನೆಗಳು ಯಾವುವು :

ಇ) ಈ ನೀರನ್ನು ಸಂಪೂರ್ಣ ಉಪಯೋಗಿಸಲು ಭದ್ರಾ ಮೇಲ್ದಂಡೆ ಯೋಜನೆಯನ್ನು ಕೈಗೊಳ್ಳಲು ಅಲ್ಲಿಯ ಜನತೆ ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು (ವಿವರ ನೀಡುವುದು)

ಈ) ನಿಗದಿತ ಅವಧಿಯಲ್ಲಿ ನೀರನ್ನು ಉಪಯೋಗಿಸಿಕೊಳ್ಳದಿದ್ದರೆ ರಾಜ್ಯದ ನೀರಾವರಿ ಅಭಿವೃದ್ಧಿಗೆ ದಕ್ಕೆ ಯಾಗುವುದಿಲ್ಲವೇ ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ೭೫೪ ಟಿಎಂಸಿ

೫೧-೫೫-೨೦೦೦

ಆ) ಬಿಳಿ ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲು ಮಾಸ್ಟರ್ ಪ್ಲಾನ್‌ನ್ನು ತಯಾರಿಸಲಾಗಿದ್ದು ಈಗಾಗಲೇ ಪೂರ್ತಿ ಆಗಿರುವ ಯೋಜನೆಗಳಿಗೆ ೩೯೮.೮೪ ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲಾಗುತ್ತಿದ್ದು ಪ್ರಗತಿಯಲ್ಲಿರುವ ಯೋಜನೆಗಳಿಗೆ ೨೪೮.೫೪ ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲು ಉದ್ದೇಶಿಸಲಾಗಿದೆ. ಬಾಕಿ ೮೭.೪೨ ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲು ಹೊಸ ಯೋಜನೆಗಳ ನಕ್ಷೆ ಮತ್ತು ಅಂದಾಜುಗಳ ತಯಾರಿಕೆ ವಿವಿಧ ಹಂತದಲ್ಲಿದೆ.

ಇ) ಹೌದು.

೫,೩೭,೦೦೦ ಎಕರೆ ಜಮೀನಿಗೆ ನೀರಾವರಿ ಒದಗಿಸುವ ೧೧೯೦ ಕೋಟಿ ರೂ.ಗಳ ಅಂದಾಜು ಮೊತ್ತದ ಭದ್ರಾ ಮೇಲ್ದಂಡೆ ಯೋಜನಾ ವರದಿಯನ್ನು ದಿನಾಂಕ ೧೨-೪-೮೮ ರಂದು ನಡೆದ ಕೃಷ್ಣಾ ಜಲಾನಯನ ಪ್ರದೇಶದ ತಾಂತ್ರಿಕ ಸಮಿತಿಯ ಸಭೆಯಲ್ಲಿ ಮಂಡಿಸಲಾಗಿತ್ತು, ತಾಂತ್ರಿಕ ಸಮಿತಿಯು ಯೋಜನೆಗೆ ಕೆಲವು ಮಾರ್ಪಾಡುಗಳನ್ನು ಸೂಚಿಸಿದ್ದು, ಅದರಂತೆ ಯೋಜನೆಯನ್ನು ಮಾರ್ಪಡಿಸಲಾಗುತ್ತಿದೆ.

ಈ) ನಿಗದಿತ ಅವಧಿಯಲ್ಲಿಯೇ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಮಾಂಜರಿ ಗ್ರಾಮದ ಕೃಷ್ಣ ನದಿಗೆ ಸೇತುವೆ ಕೆಲಸ

೨೫೧೧. ಶ್ರೀ ಪಾಗೇಗೌಡನವರು (ಸದಸ್ಯರು).—ಮಾನ್ಯ ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಂಜರಿ ಗ್ರಾಮದಲ್ಲಿ ಕೃಷ್ಣ ನದಿಗೆ ಕಟ್ಟುತ್ತಿರುವ ಸೇತುವೆ ಕೆಲಸ ಮಂದಗತಿಯಲ್ಲಿ ಸಾಗುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ನಿಗದಿತ ದಿನಾಂಕದೊಳಗೆ ಸೇತುವೆ ಕೆಲಸವನ್ನು ಪೂರ್ತಿ ಗೊಳಿಸಲು ಸರ್ಕಾರ ದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಕೆಲಸದ ಪ್ರಗತಿ ಸ್ವಲ್ಪ ನಿಧಾನವಾಗಿದೆ.

ಆ) ಬೇಕಾಗುವ ವಿನ್ಯಾಸಗಳನ್ನು ತಯಾರಿಸಿ, ತ್ವರಿತವಾಗಿ ಕೇಂದ್ರದ ಅನುಮೋದನೆ ಪಡೆದು ಕೆಲಸದ ಪ್ರಗತಿಯನ್ನು ತೀವ್ರಗತಿಯಲ್ಲಿ ಮಾಡಲು ಕಂಟ್ರಾಕ್ಟರಿಗೆ ನೋಟೀಸು ಕೊಡಲಾಗಿದೆ.

ಸ್ಯಾಪ್ ಗ್ಯಾಪ್ ಉಪನ್ಯಾಸಕರ ಬಗ್ಗೆ

೨೪೮೬. ಶ್ರೀ ಎನ್.ಹೆಚ್. ಗೌಡ (ಕುಮಟಾ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಯಾಪ್ ಗ್ಯಾಪ್ ಉಪನ್ಯಾಸಕರ ಸಮಸ್ಯೆ ಏನೆಂಬುದು ಸರ್ಕಾರಕ್ಕೆ ಮನವರಿಕೆ ಯಾಗಿದೆಯೆ ?

ಆ) ಕರ್ನಾಟಕ ರಾಜ್ಯದಲ್ಲಿರುವ ಇಂತಹ ಉಪನ್ಯಾಸಕರುಗಳ ಸಂಖ್ಯೆ ಎಷ್ಟು ?

ಇ) ಉಪನ್ಯಾಸಕರ ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಹೌದು.